ದಿನಾಂಕ ಃ 29-03-2022 ಓ ಎಸ್ ನಂ. 90/2017

ಡಿ. ಡಬ್ಲ್ಯೂ - 2

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ ಆಯ.ಡಿ.ಡಬ್ಲೂ ಪ್ರತಿವಾದಿ 1,3 ಮತ್ತು 5 ರಿಂದ 8 ಪರ ವಕೀಲರಿಂದಃ</u>

ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಈಗ ಸವದತ್ತಿ ತಾಲೂಕು ಬೂದಿಗೊಪ್ಪ ಗ್ರಾಮದಲ್ಲಿ ಈಗ ವಾಸವಿರುತ್ತೇನೆ. ಬೂದಿಗೊಪ್ಪ ಗ್ರಾಮದಲ್ಲಿ ಸುಮಾರು 35 ವರ್ಷದಿಂದ ವಾಸವಿರುತ್ತೇನೆ ಎಂದರೆ ಸರಿ. ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಏನು ಬರೆದರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.1 ಮತ್ತು 2 ನೇ ವಾದಿಯರು ನನ್ನ ಮಕ್ಕಳು ಎಂದರೆ ಸರಿ. 1 ಮತ್ತು 2 ನೇ ವಾದಿಯರು ಕೂಡಿ ನನ್ನನ್ನು ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು 1999 ನೇ ಇಸವಿಯಲ್ಲಿ ಮಾನ್ಯ ಗೌರವಾನಿತ್ವ ಪ್ರದಾನ ದಿವಾಣಿ ನ್ಯಾಯಾಲಯ ಬೈಲಹೊಂಗಲ ಇಲ್ಲಿ ನನ್ನ ಗಂಡನ ವಿರುದ್ಧ ಒಂದು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಮ್ಮ ಊರಿನ ಹಿರಿಯರು ಮತ್ತು ಕಲ್ಲೂರಿನ ಗ್ರಾಮಸ್ಥರು ರಾಜಿ ಪಂಚಾಯತಿ ಮಾಡಿ ನನಗೆ ಆಸ್ತಿಯ ರೂಪದಲ್ಲಿ ಹಣವನ್ನು ನೀಡಿರುತ್ತಾರೆ ಎಂದರೆ ಸರಿ. ಆ ಹಣವನ್ನು ಪಡೆದುಕೊಂಡು ಶಿಂದೆ ಮನೆತನದ ವಿರುದ್ಧ ಇನ್ನಾವುದೇ ಪ್ರಕರಣವನ್ನು ದಾಖಲಿಸುವುದಿಲ್ಲ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಶಿಂದೆ ಮನೆತನದ ಬಗ್ಗೆ ನನಗೆ ಪೂರ್ತಿ ಮಾಹಿತಿ ಇರುತ್ತದೆ. ಶಿಂದೆ ಮನೆತನಕ್ಕೆ ಮೂಲ ಪುಷ ರಾಮಚಂದ್ರಪ್ಪ ಶಿಂದೆ ಎಂದರೆ ಸರಿ. ಸದರಿ ರಾಮಚಂದ್ರಪ್ಪ ಶಿಂದೆ 6 ಜನ ಮಕ್ಕಳು ಎಂದರೆ ಸರಿ. ಆ 6 ಜನ ಮಕ್ಕಳಲ್ಲಿ ನನ್ನ ಮಾವ ಅಪ್ಪಯ್ಯಪ್ಪನು ಕೂಡ ಒಬ್ಬನೇ ಎಂದರೆ ಸರಿ. ಸದರಿ ಅಪ್ಪಯ್ಯಪ್ಪನಿಗೆ 3 ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಎಂದರೆ ಸರಿ. ರಾಮಪ್ಪ, ನರಸಪ್ಪ, ಸಿದ್ದಪ್ಪ ಮತ್ತು ಕಮಲವ್ವ ಇವರುಗಳು ಮಕ್ಕಳು ಆಗಿರುತ್ತಾರೆ ಎಂದರೆ ಸರಿ. ಸದರಿ ರಾಮಚಂದ್ರಪ್ಪ ತೀರಿಕೊಂಡ ನಂತರ ಆತನ ಮಕ್ಕಳುಗಳು ವಾರಸ ನಾತೆಯಿಂದ ತಮ್ಮ ಹೆಸರನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿ. ಅಪ್ಪಯ್ಯಪ್ಪನು ತೀರಿಕೊಂಡ ನಂತರ ಆತನ ಗಂಡು ಮಕ್ಕಳುಗಳು ವಾರಸ ನಾತೆಯಿಂದ ಅಪ್ಪಯ್ಯಪ್ಪನ ಆಸ್ತಿಗೆ ತನ್ನ ಹೆಸರನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿ. ಅಪ್ಪಯ್ಯಪ್ಪನ ಮಗಳಾದ ಕಮಲವ್ವನಿಗೆ ಯಾವುದೇ ಹಿಸ್ಸೆಯನ್ನು ನೀಡಿರುವುದಿಲ್ಲ ಎಂದರೆ ಸರಿ. ಕಮಲವ್ವ ರಾಮಪ್ಪ ಹಣಬರ ಈತಳನ್ನು ಕುಕಡೋಳ್ಳಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಸದರಿ ಕಮಲವ್ವನು ತನಗೆ ಆಸ್ತಿಯಲ್ಲಿ ಪಾಲು ಬೇಕು ಎಂದು ಅಸಲು ದಾವಾ ನಂ. 85/2022 ಎಂದು ದಾವೆಯನ್ನು ದಾಖಲಿಸಿರುತ್ತಾಳೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಉತ್ತರವನ್ನು ನೀಡದೇ ಸುಮ್ಮನೇ ನಿಂತಿರುತ್ತಾರೆ. ದಾವಾ ಆಸ್ತಿಯಲ್ಲಿ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೂದಿಗೊಪ್ಪ ಗ್ರಾಮದಲ್ಲಿ ಇದ್ದ ಕಾರಣ ಕಲ್ಲೂರಿನಲ್ಲಿ ಇರುವ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯ ಮಂದುವರೆದು ನಾನು ಹೋಗಿ

ಬಂದು ಮಾಡುತ್ತಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯು 2017 ರಲ್ಲಿ ದಾಖಲೆಗಳನ್ನು ತೆಗೆಸಿ ನೋಡಿದಾಗ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಮೋಸದಿಂದ ತನ್ನ ಹೆಸರನ್ನು ಹಚ್ಚಿಸಿ ಕೊಂಡಿರುತ್ತಾನೆ ಎನ್ನುವ ವಿಷಯವು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನಗೆ ಬರುವುದಿಲ್ಲ ಕಾರಣ ವಾದಿಯರನ್ನು ಬಿಟ್ಟು ದಾವಾ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆಯನ್ನು ವಾದಿಯ ಕಡೆಯಿಂದ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**